ವೀಳ್ಯದೆಲೆ ಬಲು ದುಬಾರಿ ತಾಂಬೂಲ ಪ್ರಿಯರಿಗೆ ತಲೆಬಿಸಿ

■ ನಿಜಗುಣ ದಿಂಡಲಕೊಪ್ಪ ಧಾರವಾಡ
njaguni.dindalkoppa@timesgroup.com

ರಾಜ್ಯದಲ್ಲಿ ವೀಳ್ಯದೆಲೆ ಈಗ ಬಲು ದುಬಾರಿಯಾಗಿದೆ. ಪೂರೈಕೆ ಕಡಿಮೆ ಇರುವುದರಿಂದ ಬೆಲೆ ಗಗನ ಮುಖಿಯಾಗಿದೆ. ಇದರಿಂದ ಎಲೆ ಅಡಿಕೆ ಮತ್ತು ಬೀಡಾ ಪ್ರಿಯರಿಗೆ ಕಷ್ಟವಾಗಿದೆ.

ಎಲೆಯನ್ನು ನಾನಾ ರೋಗಗಳಿಗೆ ಔಷಧವಾಗಿ ಬಳಸುವ ರೂಢಿ ಇದೆ. ಈಗ ಇದಕ್ಕೂ ಸಂಚಕಾರ ಬಂದಿದೆ.



1ಪಿಂಡಿಗೆ 14,000ರೂ.: ರಾಜ್ಯದಲ್ಲಿ ಸ್ಥಳೀಯವಾಗಿ ಬೆಳೆಯುವ ಅಂಬಾಡಿ, ಕರಿ ಎಲೆ ಹಸಿರು ಬಂಗಾರವಾಗಿದೆ. 12,000 ಎಲೆಗಳ 1 ಪಿಂಡಿ ಎಲೆಗೆ ಈಗ 14000 ರೂ. ತನಕ ನೀಡಿ ಎಪಿಎಂಸಿಗಳಲ್ಲಿ ರೈತರಿಂದ ಖರೀದಿಸಲಾಗುತ್ತಿದೆ. ಈ ದರ ಸಗಟು ಹಾಗೂ ಚಿಲ್ಲರೆ ಮಾರುಕಟ್ಟೆಯಲ್ಲಿ ಇನ್ನು ಹೆಚ್ಚಾಗಿದ್ದು, ಗ್ರಾಹಕರಿಗೆ ಒಂದು ಎಲೆಯನ್ನು 2 ರೂ.ಗೆ ಮಾರಾಟ ಮಾಡಲಾಗುತ್ತಿದೆ.

ಮಾರ್ಕೆಟ್‌ನಲ್ಲಿ ಕೊರತೆ: ರಾಜ್ಯದಲ್ಲಿ 7 ಸಾವಿರ ಹೆಕ್ಟೇರ್‌ಪ್ರದೇಶದಲ್ಲಿ ವೀಳ್ಯದೆಲೆ ಬೆಳೆಯಲಾಗುತ್ತಿದೆ. ನವೆಂಬರ ತಿಂಗಳಲ್ಲಿ ಸುರಿದ ಅತಿಯಾದ ಮಳೆಯಿಂದ ಎಲೆಬಳ್ಳಿ ಹಾನಿಗೊಳಗಾಗಿವೆ. ಹೀಗಾಗಿ ವೀಳ್ಯದೆಲೆ ಕೊರತೆಯಾಗಿ ದರ ಹೆಚ್ಚಳಗೊಂಡಿದೆ. ಚಳಿಗಾಲದಲ್ಲಿ ಎಲೆಯ ಬಳ್ಳಿಗಳು ಉದುರುವುದು ಸಾಮಾನ್ಯ. ಆದರೆ, ಚಳಿಗಾಲದ ಆರಂಭದಲ್ಲಿಯೇ ವೀಳ್ಯದೆಲೆ ಕೊರತೆ ಕಾಣಿಸಿದ್ದರಿಂದ ಫೆಬ್ರವರಿ ತಿಂಗಳಲ್ಲಿ ಈ ಸಮಸ್ಯೆ ಮತ್ತಷ್ಟು ಉಲ್ಬಣಿಸಬಹುದು ಎಂದೇ ಅಂದಾಜಿಸಲಾಗಿದೆ.

ನೂರೆಂಟು ರೋಗದ ಕಾಟ: ಚಳಿಗಾಳಿ ಜೋರಾಗಿದ್ದರಿಂದ ವೀಳ್ಯದೆಲೆ ಬಳ್ಳಿ ಚಿಗುರುವಿಕೆಯೂ ನಿಧಾನಗೊಂಡಿದೆ. ಜತೆಗೆ ಬೂದಿರೋಗ, ಎಲೆಪಿಚ್ಚಿ ರೋಗ, ಕರಿಕಡ್ಡಿ ರೋಗಗಳು ಬಳ್ಳಿಯನ್ನು ನೆಲಕುರುಳಿಸುತ್ತಿವೆ. ಕೊರತೆಯನ್ನೇ ನೆಪವಾಗಿಸಿಕೊಂಡು ಕೆಲ ಚಿಲ್ಲರೆ ವ್ಯಾಪಾರಸ್ಥರು ವೀಳ್ಯದೆಲೆಯನ್ನು ಬೇಕಾಬಿಟ್ಟಿಯಾಗಿ ಮಾರಾಟ ಮಾಡುತ್ತಿದ್ದಾರೆ.

ವೀಳ್ಯದೆಲೆ ದರಪಟ್ಟಿ

ಹಿಂದಿನ ದರ	ಈಗಿನ ದರ
ಕರಿಎಲೆ	
12,000 ಎಲೆಗಳ ಒಂದು ಪಿಂಡಿ	
₹4500- ₹8000	₹11,000-₹14,000
ಅರ್ಧ ಪಿಂಡಿ	
₹2300- ₹4200	₹5700-₹7200
ಕಾಲ್ ಪಿಂಡಿ	
₹1,200- ₹2300	₹3000- ₹3,800
ಅಂಬಾಡಿ ಎಲೆ	
ಒಂದು ಪಿಂಡಿ	
₹2000-₹4000	₹4000-₹000
ಅರ್ಧ ಪಿಂಡಿ	
₹1000-₹1900	₹1900-₹3400
ಕಾಲ್ ಪಿಂಡಿ	
₹500- ₹1,000	₹1000- ₹1800

ಔಷಧ ಗುಣ

ವೀಳ್ಯದೆಲೆಯನ್ನು ಮಲಬದ್ಧತೆ ನಿವಾರಣೆಗೆ ಬಳಸಲಾಗುತ್ತದೆ. ಗ್ಯಾಸ್ಟ್ರಿಕ್, ಕೆಮ್ಮು- ಕಫ, ತಲೆನೋವು, ಫಂಗಲ್ ಸೋಂಕುಗಳ ನಿವಾರಣೆ ಹಾಗೂ ಬಾಯಿ ಆರೋಗ್ಯಕ್ಕೆ ಔಷಧವಾಗಿ ಬಳಸಲಾಗುತ್ತದೆ. ಇದು ರಾಜ್ಯಾದ್ಯಂತ ಮನೆಮದ್ದಾಗಿದೆ.

07-01-2022 Vk Pg 09

No R-Day flower show at Lalbagh for second straight year

BENGALURU, DHNS: There will be no Republic Day flower show at Lalbagh for the second straight year.

The Horticulture Department decided to cancel the show after the state government announced fresh Covid curbs. It's the fourth flower show that has been cancelled at Bengaluru's premier lung space since the pandemic began. The other two cancelled flower shows were to have been held around Independence Day in the past two years.

The department, in association with the Mysore Horticulture Society, had looked forward to hosting the flower show around Republic Day this year. It initially planned to theme the show around 'Azadi ka Amrit Mahotsav' but later decided to pay floral attributes to Kannada actor Puneeth Rajkumar following his sudden death on October 29 last year.

The authorities had even procured about 40,000-50,000 flowering and leafy plants and raised a few thousand more in-house, a source in the department said.

No central venue

Unlike the regular show that takes place inside the Glass House, authorities had planned to hold the exhibition in various parts of Lalbagh in order to avoid crowding.

But the recent surge in Covid-19 cases has put paid to all these plans. "We have to abide by the government's Covid rules. All the plants, both procured and raised internally, will be used at the botanical garden," a senior official in the Horticulture Department said.



The Horticulture Department had procured about 50,000 plants for exhibition during the Republic Day flower show.

07-01-2022 Dec Hrd Pg 02

ಡ್ರ್ಯಾಗನ್ ಹಣ್ಣಿನಲ್ಲೂ ಕರೋನಾ ವೈರಸ್

ವಿಯೆಟ್ನಾಂ: ವಿಯೆಟ್ನಾಂನಿಂದ ಆಮದು ಮಾಡಿಕೊಂಡ ಡ್ರ್ಯಾಗನ್ ಹಣ್ಣುಗಳಲ್ಲಿ ಕರೋನಾ ಸೋಂಕಿನ ಕುರುಹುಗಳು ಕಂಡುಬಂದ ಹಿನ್ನೆಲೆಯಲ್ಲಿ ಚೀನಾದ ಅಧಿಕಾರಿಗಳು ಹಲವಾರು ಸೂಪರ್ ಮಾರ್ಕೆಟ್‌ಗಳನ್ನು ಬಂದ್ ಮಾಡಿ ದ್ದಾರೆ. ಚೀನಾದ ಝೆಜಿಯಾಂಗ್ ಮತ್ತು ಜಿಯಾಂಗ್ಸಿ ಪ್ರಾಂತ್ಯಗಳ ಕನಿಷ್ಠ 9 ನಗರಗಳಲ್ಲಿ ವಿಯೆಟ್ನಾಂನಿಂದ ಆಮದು ಮಾಡಿಕೊಂಡ ಡ್ರ್ಯಾಗನ್ ಹಣ್ಣಿನಲ್ಲಿ ಕೋವಿಡ್ ವೈರಸ್ ಮಾದರಿಗಳು ಪತ್ತೆಯಾಗಿವೆ ಎನ್ನಲಾಗಿದೆ. ಈ ಹಿನ್ನೆಲೆಯಲ್ಲಿ ಚೀನಾದ ಅಧಿಕಾರಿಗಳು ಆಮದು ಮಾಡಿಕೊಂಡ ಆಹಾರ ಉತ್ಪನ್ನಗಳ ತುರ್ತು ತಪಾಸಣೆಯನ್ನು ಪ್ರಾರಂಭಿಸಿದ್ದಾರೆ. ಹಣ್ಣು ಖರೀದಿದಾರರು ಎಚ್ಚರ ವಹಿಸಲು ಆದೇಶಿಸಿದ್ದಾರೆ. ಆದರೆ ಆಹಾರದಿಂದ ಕರೋನಾ ವೈರಸ್ ಹರಡಿದೆ ಎಂಬುದಕ್ಕೆ ಯಾವುದೇ ಪುರಾವೆಗಳಿಲ್ಲ. ಹೀಗಿದ್ದರೂ ಚೀನಾದ ಆರೋಗ್ಯ ಅಧಿಕಾರಿಗಳು ಚೀನಾವು ವೈರಸ್ ಅಲೆಯೊಂದಿಗೆ ಹೋರಾಡುತ್ತಿರುವುದರಿಂದ ಹೆಚ್ಚು ಎಚ್ಚರ ವಹಿಸಿದ್ದಾರೆ ಎಂದು ತಿಳಿದು ಬಂದಿದೆ.

07-01-2022 Vsv Pg 10

For more information visit
University Library Website
Web - uasbagrilibindia.org
E-mail- librarian@uasbangalore.edu.in